**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ 48/2024**

| | |
|---|---|
| **ಪಿರ್ಯಾದುದಾರರುಃ** | ಸಂತೋಷ ದುಂಡಪ್ಪ ಬೊರಗಲ್ಲಿ,<br>35ವರ್ಷ, ವೃತ್ತಿ ವ್ಯಾಪಾರ,<br>ಸಾಃಜೈನಗಲ್ಲಿ, ತಾಃ ಗೋಕಾಕ. |

**- ವಿರುದ್ಧ -**

| | |
|---|---|
| **ಆರೋಪಿ** | ರವಿ ನಿಂಗಪ್ಪ ಪೂಜೇರಿ,<br>ವಯಸ್ಸುಃ 30ವರ್ಷ, ವೃತಿಃ ವ್ಯಾಪಾರ,<br>ವಾಸಾಃ ರೇಣುಕಾ ಮಂದಿರ ಹತ್ತಿರ, ಕುರುಬರಗಲ್ಲಿ,<br>ತಾಃ ಗೋಕಾಕ |

**ಆಪಾದನೆ**

**ಶ್ರೀ ರಾಜೀವ ಗೋಳಸಾರ, ಬಿ.ಎ., ಎಲ್.ಎಲ್.ಎಂ., ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ, ಗೋಕಾಕ,** ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆ ಮಾಡುತ್ತಿದ್ದೇನೆಃ

ಪಿರ್ಯಾದಿದಾರರ ಮತ್ತು ಆರೋಪಿಯಾದ ನೀವು ಸುಮಾರು 10 ವರ್ಷಗಳಿಂದ ಒಳ್ಳೆಯ ಸ್ನೇಹಿತರಾಗಿದ್ದು ಮತ್ತು ಪರಿಚಯಸ್ಥರಾಗಿರುತ್ತೀರಿ, ಹೀಗಿರುವಾಗ ಆರೋಪಿಯಾದ ನೀವು ನಿಮ್ಮ ಬಟ್ಟೆ ಅಂಗಡಿಯ ಅಭಿವೃದ್ಧಿಗೆ ಹಣದ ಅವಶ್ಯಕತೆ ಇರುವ ಸಲುವಾಗಿ 2022ರಲ್ಲಿ ಪಿರ್ಯಾದುದಾರರಿಗೆ ರೂ.8,50,000/- ಸಾಲ ಕೇಳಿ, ಅದಕ್ಕೆ ಪಿರ್ಯಾದುದಾರರ ಕಡೆಯಿಂದ ದಿನಾಂಕ 28-06-2022 ರಂದು ರೂ.8,50,000/- ಗಳನ್ನು ಆರೋಪಿಯಾದ ನೀವು ಪಡೆದುಕೊಂಡಿರುತ್ತೀರಿ, ಆರೋಪಿಯಾದ ನೀವು ಸದರಿ ಸಾಲದ ಹಣವನ್ನು 01 ವರ್ಷದೊಳಗಾಗಿ ಮರಳಿ ಕೊಡುತ್ತೇನೆಂದು ತಿಳಿಸಿರುತ್ತೀರಿ.

01 ವರ್ಷ ಮುಗಿದಾದ ನಂತರ ಪಿರ್ಯಾದುದಾರರು ಗುತ್ತಿಗೆ ಕೆಲಸ ಮತ್ತು ವ್ಯಾಪಾರವನ್ನು ಅಭಿವೃದ್ದಿ ಪಡಿಸುವ ಸಲುವಾಗಿ ಮತ್ತು ಬೇರೆ ಬ್ಯಾಂಕುಗಳಿಂದ ಪಡೆದ ಸಾಲಕ್ಕೆ 18% ಬಡ್ಡಿ ಕಟ್ಟುತ್ತಿರುವುದರಿಂದ ಆರೋಪಿಯಾದ ನಿಮಗೆ ಸದರಿ ಸಾಲದ ಹಣವನ್ನು ಮರು ಪಾವತಿ ಮಾಡುವಂತೆ ಕೇಳಿದಾಗ, ಆರೋಪಿಯಾದ ನೀವು ದಿಃ02-08-2023 ರಂದು ನಿಮ್ಮ ಖಾತೆಯಾದ ಕೆನರಾ ಬ್ಯಾಂಕ್ ಇಲ್ಲಿಗೆ ಸೇರಿದ ಚೆಕ್ ನಂ.260782 ನೇದ್ದನ್ನು ರೂ.8,50,000/- ಎಂದು ನಮೂದು ಮಾಡಿ ಪಿರ್ಯಾದುದಾರರಿಗೆ ನೀಡಿರುತ್ತಿರಿ.

ತದನಂತರ ಆರೋಪಿಯಾದ ನೀವು ಪಿರ್ಯಾದುದಾರರಿಗೆ 01 ತಿಂಗಳ ನಂತರ ಸದರಿ ಚೆಕ್ಕನ್ನು ನಗಧೀಕರಿಸುವಂತೆ ವಿನಂತಿಸಿಕೊಂಡಿದ್ದು, ಅದರಂತೆ ಪಿರ್ಯಾದುದಾರರು 01 ತಿಂಗಳ ನಂತರ ಆರೋಪಿಯಾದ ನೀವು ಸದರಿ ಚೆಕ್ಕಿನಲ್ಲಿ ಹಣ ಸಂಗ್ರಹಣೆ ಮಾಡಿರುವುದಿಲ್ಲ. ಹೀಗಿರುವಾಗ

ಪಿರ್ಯಾದುದಾರರಿಗೆ ಕೊನೆಗೆ ನೀವು ದಿನಾಂಕ 01-11-2023ರಂದು ತನ್ನ ಖಾತೆಯಲ್ಲಿ ಸಾಕಷ್ಟು ಹಣ ಇರುವುದಾಗಿ ತಿಳಿಸಿರುತ್ತೀರಿ, ಅದರಂತೆ ಸದರಿ ಚೆಕ್ಕನ್ನು ಪಿರ್ಯಾದುದಾರರ ಖಾತೆಯಿರುವ ಬ್ಯಾಂಕ್ ಆಫ್ ಬರೋಡ ಶಾಖೆ ಗೋಕಾಕ ಇಲ್ಲಿಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಆರೋಪಿಯಾದ ನಿಮ್ಮ ಖಾತೆಯಲ್ಲಿ (Drawers signature differs) ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ 03-11-2023 ರಂದು ಸದರಿ ಚೆಕ್ ಅಮಾನ್ಯಗೊಂಡಿರುತ್ತದೆ.

ನಂತರ ಪಿರ್ಯಾದುದಾರರು ಆರೋಪಿಯಾದ ನೀವು ನೀಡಿದ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಮ್ಮ ವಕೀಲರ ಮುಖಾಂತರ ದಿನಾಂಕ 01-12-2023 ರಂದು ತಿಳುವಳಿಕೆ ಪತ್ರವನ್ನು ಆರೋಪಿಯಾದ ನಿಮಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಸದರಿ ನೋಟಿಸು ದಿನಾಂಕ 04-12-2023 ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಿನ ಹಣವನ್ನು ಮರುಸಂದಾಯ ಮಾಡದೆ ಇರುವ ಕಾರಣ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ.138ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆ ನಂ.1. ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿಸಿಕೊಂಡಿರಾ ? ತಿಳಿಯಿತೇ ?

ಉತ್ತರಃ

ಪ್ರಶ್ನೆ ನಂ.2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಆರೋಪಿಯು ಕೊಟ್ಟ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ಈ ದಿನ ಅಂದರೆ ದಿನಾಂಕ **18-09-2024**ರಂದು ತೆರೆದ ನ್ಯಾಯಾಲಯದಲ್ಲಿ ದೃಡೀಕರಿಸುತ್ತೇನೆ.

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**